A. Sri K. PUTTASWAMY (Minister for Labour).—

(*a*) Yes.

(*b*) Most of the representations were made orally.

(1) Mariappanapalya—4 Taps provided.

(2) Yeshwantapura—1 Tap proposed near railway line.

(*c*) Yes. Water Supply Department has been requested by the Corporation to improve water supply in Mariappanapalya and further action is being taken to provide 3 more taps in Yeshwantapura.

Steel Plant at Hospet

149. Sri D. M. SIDDAIAH (Beligere).—

Will the Minister for Industries, Information and Publicity be pleased to state :—

(*a*) the stage at which the starting of steel plant at Hospet stands at present;

(*b*) the opinion of the Expert Committee who have visited Hospet and result thereon;

(*c*) whether Hospet is not the best place in India to start a Steel Plant;

(*d*) if so, why Government has failed to achieve this big boon to our State;

(*e*) the course of action the Government intend to take to achieve the same?

A.—Sri M. RAJASEKHARA MURTHY (Minister for Industries, Information and Publicity).—

(*a*) The matter is under the consideration of the Government of India.

(*b*) Favourable.

(*c*) Yes.

(*d*) The final decision rests with the Government of India.

(*e*) The State Government is urging persistently the Government of India for the location of a steel plant for the State at Hospet.

Restoration of Irrigation Tanks

150. Sri S. BANGARAPPA (Sorab).—

Will the Minister for Public Works be pleased to state :—

(*a*) the number of irrigation tanks in Soraba Taluk; the number of them restored and repaired and the number of them not restored and not repaired;

(*b*) the amount spent on these tanks during the last three year and the total acreage irrigated and still to be irrigated?

A.—**Sri A. J. DODDAMETI** (Minister of State for Minor Irrigation).—

(*a*) No. of Irrigation tanks ...	...	1,200
No. of them restored and repaired.	...	755
No. of them not restored and not repaired.	...	445
(*b*) (i) Amount spent in the last three years	..	Rs. 8,99,682
(ii) Area irrigated	...	36,693 acres.
(iii) Area still to be irrigated	...	21,623 acres.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸ್ವಾಮಿ, ಅಧ್ಯಕ್ಷರೇ, ಈ ಅಧಿವೇಶನ ಪ್ರಾರಂಭವಾಗಿ ಇಂದಿಗೆ 7—8 ದಿನಗಳಾಯಿತು. ಆದರೆ ಪ್ರಶ್ನೋತ್ತರಗಳ ಕಾಲದಲ್ಲಿ ಒಂದು ದೊಡ್ಡ ಬಿಕ್ಕಟ್ಟು ಉಂಟಾಗಿದೆ. ಹೀಗಾಗಿ ನಾನು ಇಲ್ಲಿ ಚರ್ಚೆಮಾಡುವುದಕ್ಕಾಗಿ ಕಳುಹಿಸಿದ್ದ 4 ಪ್ರಶ್ನೆಗಳು ಲ್ಯಾಪ್ಸಾದವು. ಒಂದು ಪ್ರಶ್ನೆಯ ಮೇಲೆ 5-6 ಉಪಪ್ರಶ್ನೆಗಳನ್ನು ಹಾಕುವುದಕ್ಕೂ ಕೂಡ ಅವಕಾಶವಾಗುತ್ತಿಲ್ಲ. ತಾವೇನೋ ಬಹಳ ದೊಡ್ಡ ಮನಸ್ಸುಮಾಡಿ ಪ್ರತಿದಿನವೂ ಇಲ್ಲಿ 30 ಪ್ರಶ್ನೆಗಳನ್ನಾದರೂ ಚರ್ಚೆಗೆ ಇಟ್ಟುಕೊಳ್ಳಬೇಕೆಂಬ ಒಂದು ಘನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ ಆ ಉದ್ದೇಶ ಮಾತ್ರ ಸಫಲವಾಗುತ್ತಿಲ್ಲ. ದಿನಕ್ಕೆ 15 ಪ್ರಶ್ನೆಗಳೂ ಕೂಡ ಚರ್ಚೆಯಾಗುತ್ತಿಲ್ಲ. ಏಕೆ ಹೀಗಾಗುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೂ ಕೂಡ ನಮಗೆ ಅವಕಾಶ ಸಿಗುತ್ತಿಲ್ಲ. ತಮ್ಮ ತೀರ್ಮಾನಕ್ಕೆ ಅಗೌರವವನ್ನುಂಟು ಮಾಡಬೇಕೆಂಬ ಅಥವಾ ಅದನ್ನು ಹೀಯಾಳಿಸಬೇಕೆಂಬ ಉದ್ದೇಶ ನಮಗಾರಿಗೂ ಇಲ್ಲ. ನಮಗೆ ಒಂದೆರಡು ಉಪಪ್ರಶ್ನೆ ಹಾಕುವುದಕ್ಕೆ ಕೂಡ ಅವಕಾಶವಾಗುತ್ತಿಲ್ಲ. ಎಲ್ಲಾ ಸದಸ್ಯರಿಗೂ ಬಹಳ ತೊಂದರೆಯಾಗಿದೆ. ನಾನು ಈ ವಿಷಯ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಎರಡನೆಯ ವಿಷಯ ಎಂದರೆ ಪತ್ರಿಕೋದ್ಯಮಿಗಳ ಬಗ್ಗೆ ಮೊನ್ನೆ ದಿವಸ ಚರ್ಚೆ ನಡೆಯಿತು, ಅವರಿಗೆ ಬೇರೆ ಒಂದು ಜಾಗ ಮಾಡಬೇಕು, ಲಾಂಜ್ ಮಾಡಬೇಕೆಂದು ಚರ್ಚೆ ಆಯಿತು ಅದರ ಬಗ್ಗೆ ಶ್ರೀಮಾನ್ ಸಿದ್ಧವೀರಪ್ಪನವರು ಮತ್ತು ಶಿವಪ್ಪನವರು ಹೇಳಿದ್ದಾರೆ. ನನಗೆ ತಿಳಿದು ಬಂದದ್ದು ಏನೆಂದರೆ ಈ ಪತ್ರಿಕೆಗಳಲ್ಲಿ ದೊಡ್ಡ ಪತ್ರಿಕೆಗಳು.....

Mr. SPEAKER.—No matter can be represented without previous notice. Members must follow the procedure laid down in this behalf.

ಶ್ರೀ ಎಂ. ಎಸ್. ಕೃಷ್ಣನ್.—ಇದು ಹೊಸ ಪ್ರಶ್ನೆ ಸ್ವಾಮಿ, ರಿಪಿಟಿಷನ್ ಅಲ್ಲ, ಕಾಲ ಹರಣ ಮಾಡಬೇಕೆಂಬ ಅಭಿಪ್ರಾಯ ನನಗೆ ಇಲ್ಲ. I do not want to repeat anything. It appears that in the Press Gallery there is a distinction made between the small newspapers and big newspapers.

Mr. SPEAKER.—Hon'ble Member Mr. Krishnan, may meet me in my chamber to discuss about it.

Sri M. S. KRISHNAN.—My only submission is that accommodation may be provided to all the members of the Press without making any distinction between the small and big newspapers.

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ನಾನು ನೋಟೀಸ್ ಕೊಟ್ಟಿದ್ದೇನೆ. ಹಾಸನ ರೈಲ್ವೇ ಸ್ಟೇಷನ್‌ನಲ್ಲಿ 2 ಸಾವಿರ ಮೂಟೆ ಗೋಧಿ ಹುಳಿತು ಹೋಗುತ್ತಾ ಇದೆಯೇ ಇಲ್ಲವೇ ಎಂಬುದನ್ನು ತಿಳಿಸಬೇಕಾದರೆ ಹತ್ತು ದಿವಸ ಬೇಕೇ ? ನನಗೆ ತಿಳಿದು ಬಂದಿರುವ ಸಮಾಚಾರದ ಪ್ರಕಾರ 2 ಸಾವಿರ ಮೂಟೆ ಅಲ್ಲದೆ ಇನ್ನೂ ಎರಡು ಸಾವಿರ ಮೂಟೆ ಅಮೆರಿಕನ್ ಗೋಧಿ ಮತ್ತೆಲ್ಲೋ ಕೊಳೆಯುತ್ತಾ ಇದೆಯಂತೆ. ಈ ಅಭಾವ ಪರಿಸ್ಥಿತಿಯಲ್ಲಿ ಸರ್ಕಾರದವರಿಗೆ ಹತ್ತು ದಿವಸವಾದರೂ ಕೂಡ ಅದಕ್ಕೆ ಸಂಬಂಧಪಟ್ಟ ಉತ್ತರವನ್ನು ಈ ಸಭೆಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ ಎಂದರೆ ನಿಜವಾಗಿಯೂ ಕೂಡ ವಿಷಾದನೀಯ. ಈ ವಿಚಾರದಲ್ಲಿ ತೀವ್ರವಾದ ಒಂದು ಆಸಕ್ತಿಯನ್ನು ವಹಿಸಿ ತಾವು ಸಂಬಂಧಪಟ್ಟವರಿಂದ ವಿಷಯವನ್ನು ತರಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—I shall look into it.